**ದಿಃ17.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ 3ನೇ ಎದುರುದಾರರ ಪರ ಶ್ರೀ. ಕೆ ಡಿ ಡಿ ವಕೀಲರಿಂದ ಃ**

ನಾನು ಈ ಅರ್ಜಿಯಲ್ಲಿ 3ನೇ ಎದುರುದಾರರ ಸಂಸ್ಥೆಯಲ್ಲಿ ಅಸಿಸ್ಟೆಂಟ ಮ್ಯಾನೇಜರ್ ಆಗಿರುತ್ತೇನೆ, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಅಧಿಕಾರ ಪತ್ರ ನಿಆರ್ 1
2. ವಿಮಾ ಪಾಲಿಸಿ ನಿ ಆರ್ 2 ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಪಿ ಎಸ್ ವಕೀಲರಿಂದ ಃ**

ಈ ಅರ್ಜಿಯ ವಿಚಾರಣೆಗಳನ್ನ ನಾನು ತಿಳಿದುಕೊಂಡಿದ್ದೇನೆ. ಸಾಕ್ಷಿಯು ಮುಂದುವರೆದು ಪೊಲೀಸ್ ದಾಖಲೆಗಳ ಆಧಾರದ ಮೇಲೆ ತಿಳಿದುಕೊಂಡಿದ್ದೇನೆ

ಎನ್ನುತ್ತಾರೆ. ತನಿಖಾಧಿಕಾರಿ ಸಲ್ಲಿಸಿರುವ ನಿಪಿ 6 ರಲ್ಲಿ 2ನೇ ಎದುರುದಾರರ ಚಾಲನ ಪರವಾನಿಗೆ ಪತ್ರದ ವಿವರ ಇದೆ ಎಂದರೆ ಸರಿ. ತನಿಖಾ ನಂತರದಲ್ಲಿ ಪ್ರ ವರ್ತಮಾನ ವರದಿಯಲ್ಲಿ ತೋರಿಸಿದ ಆರೋಪಿಗಿಂತ ಬೇರೆ ಆರೋಪಿಯನ್ನ ದೋಷಾರೋಪಣ ಪತ್ರದಲ್ಲಿ ತೋರಿಸಬಹುದು ಎಂದರೆ ಸರಿ. ಸಾಕ್ಷಿಯು ಮಂದುವರೆದು ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ದೋಷಾರೋಪಣ ಪತ್ರದಲ್ಲ ಬೇರೆಯವರ ಹೆಸರನ್ನು ತೋರಿಸಿಲಾಗಿದೆ ಎನ್ನುತ್ತಾರೆ. ಸಾಕ್ಷಿಯು ಮತ್ತೂ ಮುಂದುವರೆದು ವಿಮೆಗೆ ಒಳಪಟ್ಟ ವಾಹನವನ್ನು ಸಹ ಸುಳ್ಳಾಗಿ ಸೇರ್ಪಡೆ ಮಾಡಲಾಗಿದೆ ಎನ್ನುತ್ತಾರೆ. ದೋಷರೋಪಣವನ್ನು ಪೊಲೀಸರವರೆ ಸಲ್ಲಿಸಿದ್ದಾರೆ ಎಂದರೆ ಸರಿ. ಪೊಲೀಸರಿಗೆ 1 ಮತ್ತು 2ನೇ ಎದುರುದಾರರನ್ನ ದೋಷಾರೋಪಣ ಪಟ್ಟಿಯಲ್ಲಿ ಸೇರ್ಪಡೆಮಾಡುವ ಅಗತ್ಯವಿಲ್ಲ ಎಂದರೆ ಸಾಕ್ಷಿ ಪೋಲೀಸರು ಅರ್ಜಿದಾರರು ಮತ್ತು 1 ಹಾಗೂ 2ನೇ ಎದುರುದಾರರ ಜೊತೆ ಶಾಮಿಲಾಗಿ ಸುಳ್ಳಾಗಿ ಆರೋಪಿ ಮತ್ತು ವಿಮೆಗೆ ಒಳಪಟ್ಟ ವಾಹನವನ್ನು ಸೇರ್ಪಡೆ ಮಾಡಿದ್ದಾರೆ ಎನ್ನುತ್ತಾರೆ. ನಮ್ಮ ಕಂಪನಿಯ ಬಾಧ್ಯತೆಯಿಂದ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪೊಲೀಸಿನವರು, ಅರ್ಜಿದಾರರು, 1 ಹಾಗೂ 2ನೇ ಎದುರುದಾರರ ಜೊತೆ ಶಾಮಿಲಾಗಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ. ಸಂಬಂಧಪಟ್ಟ ನ್ಯಾಯಾಲಯದಲ್ಲಿ 2ನೇ ಎದುರುದಾರರ ತಪ್ಪು ಒಪ್ಪಿಕೊಂಡಿದ್ದಾರೆ ಎಂದರೆ ಸಾಕ್ಷಿ

ಈ ಸಂಬಂಧ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಅಪಘಾತ ಕಾಲಕ್ಕೆ ಆಪಾದಿತ ವಾಹನ ನಮ್ಮ ಸಂಸ್ಥೆಯಿಂದ ವಿಮೆಗೆ ಒಳಪಟ್ಟಿತ್ತು ಎಂದರೆ ಸಾಕ್ಷಿ ಟಿ ಎನ್ 12 ಕೆ 8721 ವಾಹನ ನಮ್ಮ ಸಂಸ್ಥೆಯಿಂದ ವಿಮೆಗೆ ಒಳಪಟ್ಟಿತ್ತು ಆದರೆ ಅದು ಅಪಘಾತದಲ್ಲಿ ಭಾಗಿಯಾಗಿಲ್ಲ ಎನ್ನುತ್ತಾರೆ. ಸದರಿ ವಾಹನ ಅಪಘಾತದಲ್ಲಿ ಭಾಗಿಯಾಗಿದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾವರದಿ ಆಪಾದಿತ ವಾಹನ ಭಾಗಿಯಾಗಿರುವುದನ್ನ ದೃಢಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿ ಆರ್ 2 ಕ್ಕೆ ಈ ಅಪಘಾತ ಒಳಪಡುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರ ಕೋರಿದ ಪರಿಹಾರವನ್ನ ಕೊಡಲು ನಮ್ಮ ಸಂಸ್ಥೆ ಬಾಧ್ಯಸ್ಥ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.